ಓ ಎಸ್ ನಂಃ 116/2016
ಡಿ ಡಬ್ಲ್ಯೂ ಃ 1

ದಿಃ 05.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ವಿ ಕೆ ವಕೀಲರಿಂದಃ-**

ದಾವಾ ಸರ್ವೆ ನಂಬರ್ ನ ಬೇರೆ ವಿಸ್ತೀರ್ಣಕ್ಕೆ ವಾದಿಯ ಗಂಡ ಕರ್ನಾಟಕ ಗೃಹ ಮಂಡಳಿಯಿಂದ ಪರಿಹಾರ ಪಡೆದಿದ್ದಾರೆ ಎಂದರೆ ಸರಿಯಲ್ಲ. ವಾದಿಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಅಸಲು ಪತ್ರವನ್ನು ಕರ್ನಾಟಕ ಗೃಹ ಮಂಡಳಿಯಲ್ಲಿ ಹಾಜರುಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಸಲ್ಲಿಸುವುದಕ್ಕಿಂತ ಪೂರ್ವದಲ್ಲಿ ವಾದಿಯು 1 ನೇ ಪ್ರತಿವಾದಿಗೆ ನೋಟಿಸ್ ನ್ನು ಜಾರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ 15 ಮತ್ತು 16 ರ ಛಾಯಾಚಿತ್ರಗಳಲ್ಲಿ ಇರುವ ವ್ಯಕ್ತಿ ವಾದಿ ಎಂದರೆ ಸರಿ. ನಿಪಿ 15 ಮತ್ತು 16 ರ ಛಾಯಾಚಿತ್ರದಲ್ಲಿ ಕಾರಣಿಸುತ್ತಿರುವ ನಾಮಫಲಕವನ್ನು ತಾವು ನೋಡಿದ್ದೀರ ಎಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಈಗಿನ ಸ್ಥಿತಿಯನ್ನು ತಾವು ನೋಡಿದ್ದೀರ ಎಂದರೆ ಸಾಕ್ಷಿಯು ಕರ್ನಾಟಕ ಗೃಹ ಮಂಡಳಿಯವರು ರಸ್ತೆ ನಿರ್ಮಾಣ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವ ಸ್ವತ್ತಿನಲ್ಲಿ ಹಾಕಿರುವ ನಾಮಫಲಕ ಕರ್ನಾಟಕ ಗೃಹ ಮಂಡಳಿಯವರು ಭೂ ಸ್ವಾಧೀನ ಮಾಡಿಕೊಳ್ಳುವವರೆಗೆ ಇತ್ತು ಎಂದರೆ ಸರಿಯಲ್ಲ. ನಿಪಿ 17 ಮತ್ತು ನಿಪಿ 18 ರ ಛಾಯಾಚಿತ್ರದಲ್ಲಿ ಬೆಟ್ಟಯ್ಯನವರು ಇದ್ದಾರೆ ಎಂದರೆ ಸರಿ. ನಿಪಿ 17 ಮತ್ತು ನಿಪಿ 18 ರ ಛಾಯಾಚಿತ್ರದಲ್ಲಿ ಕಾಣಿಸಿರುವ ಸ್ವತ್ತು ದಾವಾ ಸ್ವತ್ತು ಆಗಿದ್ದು ಸದರಿ ಸ್ವತ್ತಿನಲ್ಲಿ ವಾದಿ ಮತ್ತು ಆಕೆಯ ಗಂಡ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ತಾವು ಹಾಜರುಪಡಿಸಿರುವ ಕಂದಾಯ ದಾಖಲೆಗಳು 2014 ರ ನಂತರದ ದಾಖಲಾತಿಗಳು ಎಂದರೆ ಸರಿ. 2014 ಸಾಲಿಗಿಂತ ಹಿಂದಿನ ಕಂದಾಯ ರಶೀದಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಸ್ವತಃ ಮುಂದುವರೆದು 2007 ಮತ್ತು 2008 ರ ಕಂದಾಯ ದಾಖಲಾತಿಗಳನ್ನು ನಾನು ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿನ ಖಾತೆಯನ್ನು ತಮ್ಮ ತಾಯಿಯವರ ಹೆಸರಿಗೆ ವರ್ಗಾವಣೆ ಮಾಡಿಕೊಂಡ ನಂತರ ತಾವು ಕಂದಾಯವನ್ನು ಪಾವತಿ ಮಾಡಿದ್ದೀರಿ ಎಂದರೆ ಸರಿ. ಮುತ್ತಯ್ಯನವರಾಗಲಿ ಅಥವಾ ತಮ್ಮ ತಂದೆ ಕೆಂಪಯ್ಯನವರಾಗಲಿ 2006 ಮತ್ತು 2007 ರ ಪೂರ್ವದಲ್ಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕಂದಾಯ ಪಾವತಿ ಮಾಡಿರುವ ಬಗ್ಗೆ ಯಾವುದಾದರೂ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪಹಣಿಗಳನ್ನು ಹೊರತುಪಡಿಸಿ ತಾವು ಮತ್ತು ತಮ್ಮ ಪೂರ್ವಿಕರು ದಾವಾ

ಓ ಎಸ್ ನಂಃ 116/2016

ಡಿ ಡಬ್ಲ್ಯೂ ಃ 1

ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿದ್ದೀರ ಎಂದು ತೋರಿಸಲು ಬೇರೆ ಯಾವುದಾದರೂ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಕ್ರಯ ಪತ್ರ, ಮ್ಯುಟೇಷನ್, ರೆಕಾರ್ಡ್ ಆಫ್ ರೈಟ್ಸ್ ನ್ನು ಹಾಜರುಪಡಿಸಿರುತ್ತೇನೆ. ತಾವು ಕ್ರಯ ಪತ್ರದ ಅಸಲು ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯ ಬಳಿ ಇರುತ್ತದೆ, ನಾನು ಹಾಜರುಪಡಿಸಬಲ್ಲೆ ಎಂದು ನುಡಿಯುತ್ತಾರೆ. ತಾವು ಹಾಜರುಪಡಿಸಿರುವ 1971 ರಿಂದ 2001 ರ ಪಹಣಿ ಪತ್ರಿಕೆಗಳಲ್ಲಿ ಮುತ್ತಯ್ಯನವರ ಹೆಸರು ನಮೂದಾಗಿಲ್ಲ ಎಂದರೆ ಸಾಕ್ಷಿ ಮುತ್ತಯ್ಯನವರು ಅವಿದ್ಯಾವಂತರಾಗಿರುತ್ತಾರೆ ಆದ್ದರಿಂದ ಅವರ ಹೆಸರನ್ನು ಸದರಿ ಪಹಣಿ ಪತ್ರಿಕೆಗಳಲ್ಲಿ ನಮೂದು ಮಾಡಿರುವುದಿಲ್ಲ. ನಿಡಿ 45 ರ ಲಿಖಿತ ಹೇಳಿಕೆ ಪತ್ರದಲ್ಲಿ ತಮ್ಮ ತಾಯಿಯವರು ಏನು ಬರೆಸಿದ್ದಾರೆ ಎಂದು ತಿಳಿದುಕೊಂಡಿದ್ದೀರ ಎಂದರೆ ಸಾಕ್ಷಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ 45 ರ ಲಿಖಿತ ಹೇಳಿಕೆ ಪತ್ರದಲ್ಲಿ ತಮ್ಮ ತಾಯಿ ಹಾಗೂ ಗಾಳಪ್ಪನವರು ದಾವಾ ಸ್ವತ್ತಿನಲ್ಲಿ 1938 ನೇ ಸಾಲಿನಿಂದ ಸ್ವಾಧೀನಾನುಭದಲ್ಲಿದ್ದೇವೆ ಆದುದರಿಂದ ದಾವಾ ಸ್ವತ್ತಿನ ಬಗ್ಗೆ Tittle by way of adverse possession ಪಡೆದುಕೊಂಡಿರುವುದಾಗಿ ಹೇಳಿ ಬರೆಸಿದ್ದಾರೆ ಎಂದರೆ ಸಾಕ್ಷಿಯು ಕೈತಪ್ಪಿನಿಂದ ಬರೆದಿರಬಹುದು.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**